(ಬೆಂಗಳೂರು ನೋಂ : ಜೆ.ಆರ್.ಬಿ.ಆರ್.ಜಿ.ಎನ್.:69:148:2003-04) ಸ್ಥಾಪನೆ : 1996

# UDAYA SOUHARDA CO-OPERATIVE SOCIETY LTD

# ಉದಯ ಸೌಹಾರ್ದ ಸಹಕಾರಿ ಸಂಘ ನಿಯಮಿತ

"ಉದಯ ಸಹಕಾರ ಭವನ", ನಂ. 29/11, 1ನೇ ಮುಖ್ಯರಸ್ತೆ, ಮೌಂಟ್‌ಜಾಯ್ ರಸ್ತೆ,

ಹನುಮಂತನಗರ, ಬೆಂಗಳೂರು - 560 019. **ದೂರವಾಣಿ: 26621893, 26600486, 26614950.**

(Regn. No.: J.R.B.:R.G.N.:69:148:2003-04) ESTD : 1996


ಸಂಖ್ಯೆ: ಉಸೌಸಸಂನಿ/ವಾ.ಸ.ಸ/2025-26 ದಿನಾಂಕ: 10-07-2025

## 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ (ANNUAL GENERAL BODY MEETING) ನೋಟೀಸು

### ದಿನಾಂಕ 27-07-2025, ಭಾನುವಾರ

ಉದಯ ಸೌಹಾರ್ದ ಸಹಕಾರಿ ಸಂಘ ನಿಯಮಿತದ **30ನೇ ವಾರ್ಷಿಕ ಸಾಮಾನ್ಯ ಸಭೆಯನ್ನು** ದಿನಾಂಕ: **27ನೇ ಜುಲೈ 2025ನೇ ಭಾನುವಾರದಂದು** ಬೆಳಿಗ್ಗೆ 11:00 ಗಂಟೆಗೆ **ಶ್ರೀ ಗುರುನರಸಿಂಹ ಕಲ್ಯಾಣ ಮಂದಿರ,** ನಂ.12, ಬುಲ್ ಟೆಂಪಲ್ ರಸ್ತೆ, ರಾಮಕೃಷ್ಣ ಆಶ್ರಮದ ಎದುರು, ಬೆಂಗಳೂರು - 560004ರಲ್ಲಿ ಈ ಕೆಳಕಂಡ ಕಾರ್ಯಸೂಚಿಯಲ್ಲಿರುವಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಸಹಕಾರಿಯ ಸದಸ್ಯರುಗಳು ಈ ಸಭೆಯಲ್ಲಿ ಹಾಜರಿರಲು ಕೋರಿದೆ.

### ಕಾರ್ಯಸೂಚಿ

1. ಪ್ರಾರ್ಥನೆ
2. ಸ್ವಾಗತ ಭಾಷಣ
3. 30ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
4. 29ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು ಮತ್ತು ಅಂಗೀಕರಿಸುವುದು.
5. 2024-25ನೇ ಸಾಲಿನ ವಾರ್ಷಿಕ ವರದಿಯ ಮಂಡನೆ ಮತ್ತು ಅನುಮೋದಿಸುವುದು.
6. 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಆರ್ಥಿಕ ತಃಖ್ತೆಗಳ ಮಂಡನೆ ಮತ್ತು ಅನುಮೋದಿಸುವುದು.
7. 2024-25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ಅನುಮೋದಿಸುವುದು.
8. 2024-25ನೇ ಸಾಲಿನಲ್ಲಿ ಮುಂಗಡಪತ್ರಕ್ಕಿಂತ ಮೀರಿದ ಹೆಚ್ಚುವರಿ ಖರ್ಚುಗಳ ಅನುಮೋದನೆ.
9. 2025-26ನೇ ಸಾಲಿನ ಮುಂಗಡಪತ್ರವನ್ನು ಮಂಡಿಸುವುದು ಮತ್ತು ಅನುಮೋದಿಸುವುದು.
10. 2025-26ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ ಮತ್ತು ಸಂಭಾವನೆ ನಿಗಧಿಪಡಿಸುವುದು.
11. ಸದಸ್ಯರುಗಳಿಂದ ಬಂದ ಸಲಹೆ ಸೂಚನೆಗಳು.
12. 2024-25ನೇ ಸಾಲಿನ ನಿವ್ವಳ ಲಾಭದ ವಿಲೇವಾರಿ.
13. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.
14. ವಂದನಾರ್ಪಣೆ.

ಆಡಳಿತ ಮಂಡಳಿ ಅನುಮತಿ ಮೇರೆಗೆ
ಸಹಿ
**ಶ್ರೀಕಾಂತ. ಜಿ**
ಮುಖ್ಯಕಾರ್ಯನಿರ್ವಹಣಾಧಿಕಾರಿ

### ವಿಶೇಷ ಸೂಚನೆಗಳು:

1. ಸಭೆಗೆ ಬಂದ ತಕ್ಷಣ ಹಾಜರಿ ಪುಸ್ತಕದಲ್ಲಿ ಸಹಿ ಮಾಡುವುದು.
2. ವಿಳಾಸ ಬದಲಾವಣೆ ಇದ್ದಲ್ಲಿ ಕೂಡಲೇ ಲಿಖಿತ ಮೂಲಕ ತಿಳಿಸುವುದು.
3. ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ 7 ದಿನ ಮುಂಚಿತವಾಗಿ ಆಡಳಿತ ಮಂಡಳಿಗೆ ತಲುಪಿಸುವುದು.
4. ಖಾಯಂ ಸದಸ್ಯರಲ್ಲದವರು ಯಾವುದೇ ಕಾರಣಕ್ಕೂ ಸಭೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
5. 2024-25ನೇ ಸಾಲಿನ ವಾರ್ಷಿಕ ವರದಿಯನ್ನು ದಿನಾಂಕ: 15-07-2025ರಿಂದ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಸಹಕಾರಿಯ ವೆಬ್‌ಸೈಟ್ www.udayasouharda.inನಲ್ಲಿಯೂ ಲಭ್ಯವಿರುತ್ತದೆ.
6. ಗುರುತಿನ ಚೀಟಿ ಪಡೆಯದ ಸದಸ್ಯರು ತಮ್ಮ ಭಾವಚಿತ್ರ ನೀಡಿ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.
7. 3 ವರ್ಷ ಮೀರಿದ ಡಿವಿಡೆಂಡ್ ಹಣವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
8. ಸಹಕಾರಿಯ ಸದಸ್ಯರು ಸಾಮಾನ್ಯ ಸಭೆಗಳಿಗೆ ಹಾಜರಾಗದಿದ್ದಲ್ಲಿ/ಸಹಕಾರಿಯ ಉಪನಿಯಮದಂತೆ ಕನಿಷ್ಠ ವ್ಯವಹಾರ ನಡೆಸದಿದಲ್ಲಿ / ಸುಸ್ತಿದಾರನಾದಲ್ಲಿ / ಸುಸ್ತಿದಾರರಿಗೆ ಜಾಮೀನುದಾರರಾಗಿದ್ದಲ್ಲಿ, ಸಹಕಾರಿಯ ಮಹಾಸಭೆಯಲ್ಲಿ ಭಾಗವಹಿಸಲು ಮತ್ತು ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹರಿರುವುದಿಲ್ಲ.

Venue : **SRI GURUNARASIMHA KALYANA MANDIRA**
Bull Temple Road, Opposite Ramakrishna Ashrama,
BENGALURU - 560004

**ವಾರ್ಷಿಕ ಸಾಮಾನ್ಯ ಸಭೆಯ ದಿನ ಬೆಳಗಿನ ಉಪಹಾರ ಮತ್ತು ಭೋಜನದ ವ್ಯವಸ್ಥೆ ಮಾಡಲಾಗಿದೆ.**

Scanned with OKEN Scanner

### ಸಾಮಾನ್ಯ ಸಭೆಯ ದಿನದಂದು ವಿಶೇಷ ಕಾರ್ಯಕ್ರಮಗಳು:

**ಬೆಳಿಗ್ಗೆ 9:30 ಗಂಟೆಗೆ :**

1. ಸಾರ್ವಜನಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರ ಸನ್ಮಾನ ಕಾರ್ಯಕ್ರಮ.
2. ಸಹಕಾರಿಯ ಹಿರಿಯ ನಾಗರೀಕ ಸದಸ್ಯರುಗಳಿಗೆ ಸನ್ಮಾನ ಕಾರ್ಯಕ್ರಮ.
3. ಸಹಕಾರಿಯ ಸಿಬ್ಬಂದಿ ವರ್ಗದವರಿಗೆ ಸನ್ಮಾನ ಕಾರ್ಯಕ್ರಮ.

**ಸಂಜೆ 4:30ಕ್ಕೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮತ್ತು ಮನರಂಜನಾ ಕಾರ್ಯಕ್ರಮ**

2024-25ನೇ SSLCಯಲ್ಲಿ ಶೇ80ಕ್ಕೆ ಮೇಲ್ಪಟ್ಟು, ದ್ವಿತೀಯ PUCಯಲ್ಲಿ ಶೇ75ಕ್ಕೆ ಮೇಲ್ಪಟ್ಟು ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಪ್ರತೀ ಸೆಮಿಸ್ಟರ್‌ನಲ್ಲೂ ಶೇ.65ಕ್ಕೆ ಮೇಲ್ಪಟ್ಟು ಅಂಕ ಪಡೆದ ಸದಸ್ಯರು/ಸದಸ್ಯರ ಮಕ್ಕಳು ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ. ಹೆಚ್ಚಿನ ವಿವರಗಳಿಗೆ ಸಹಕಾರಿಯ ಕಛೇರಿ ವೇಳೆಯಲ್ಲಿ ವಿಚಾರಿಸುವುದು.

### ಸಹಕಾರಿಯಲ್ಲಿ ದೊರೆಯುವ ಸೌಲಭ್ಯಗಳು:

ನಮ್ಮ ಸಹಕಾರಿಯು ಸದಸ್ಯರಿಂದ ಠೇವಣಿ ಸಂಗ್ರಹಣೆ ಮಾಡುವುದು, ಸದಸ್ಯರಿಗೆ ಸಾಲ ನೀಡುವುದು ಮತ್ತು ಸದಸ್ಯರುಗಳ ಅನುಕೂಲಕ್ಕಾಗಿ ಸದಸ್ಯರೊಂದಿಗೆ ಚೀಟಿ ವ್ಯವಹಾರ ನಡೆಸಲಾಗುತ್ತಿದೆ. ಸಹಕಾರಿಯ ಸದಸ್ಯರುಗಳಿಗಾಗಿ ಭದ್ರತಾಕಪಾಟುಗಳ **(Safe Deposit Lockers)** ಸೌಲಭ್ಯವನ್ನು ಒದಗಿಸಲಾಗಿದೆ. ಸದಸ್ಯರುಗಳು ಸಹಕಾರಿಯು ನೀಡುವ ಸೇವೆಗಳ ಸೌಲಭ್ಯಗಳನ್ನು ಪಡೆದುಕೊಂಡು ಸದುಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

### ಸಹಕಾರಿಯ ಕಛೇರಿ ವೇಳೆ:

ಸೋಮವಾರದಿಂದ ಶನಿವಾರ: ಬೆಳಗ್ಗೆ: 10:00 ರಿಂದ ಸಂಜೆ 7:00

ಭೋಜನ ವಿರಾಮ: ಮಧ್ಯಾಹ್ನ 1:45 ರಿಂದ 2:30ರವರೆಗೆ

**(ಆಡಳಿತ ಮಂಡಳಿ ನಿಗಧಿಗೊಳಿಸಿದ ಸಾರ್ವತ್ರಿಕ ರಜಾದಿನಗಳನ್ನು ಹೊರತುಪಡಿಸಿ)**

**ಭಾನುವಾರ ರಜಾದಿನ**

ತೆರೆದ-ಅಂಚೆ

ಶ್ರೀಮತಿ/ಶ್ರೀ ______________________

______________________

______________________

ಇಂದ,

**UDAYA SOUHARDA CO-OPERATIVE SOCIETY LTD**

**ಉದಯ ಸೌಹಾರ್ದ ಸಹಕಾರಿ ಸಂಘ ನಿಯಮಿತ,**

"ಉದಯ ಸಹಕಾರ ಭವನ", ನಂ. 29/11, 1ನೇ ಮುಖ್ಯರಸ್ತೆ,

ಮೌಂಟ್‌ಜಾಯ್‌ರಸ್ತೆ, ಹನುಮಂತನಗರ, ಬೆಂಗಳೂರು - 560019

ದೂರವಾಣಿ: 26621893, 26600486, 26614950.

Scanned with OKEN Scanner